ತಾವು ಈ ಕಡೆ ಬಂದಿದ್ದೀರಿ, ಹಣ ಆ ಕಡೆ ಹೋಗಿದೆ. ನೀವು ಹೋಗಿದೆ. ನೀವು ಹೋಗಿ ಜಿಲ್ಲಾಧಿಕಾರಿಗಳ ಜೊತೆ ಮತ್ತು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಕುಳಿತು ರಿವ್ಯೂ ಮಾಡಿ. ಈಗ ಹಣ ಲಭ್ಯವಿದೆ. ಅಗತ್ಯತೆ ಎಲ್ಲೆಲ್ಲಿದೆ ಅಲ್ಲಿ ಆ ಹಣವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬಹುದು. 13th Finance ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. O & M ಅನ್ನು 13th Finance ನಿಂದ ಬಂದಿರತಕ್ಕಂಥ ಹಣದಲ್ಲಿ ನೀವು ತೆಗೆದುಕೊಳ್ಳಬಾರದೆಂದು ನಿರ್ಬಂಧ ಮಡಿದ್ದೇವೆ. ಆದರೆ, ಈ ಬಗ್ಗೆ ಚರ್ಚೆ ಕೇಳಿದ ಮೇಲೆ ಹಾಗೂ ಬೇರೆ ಬೇರೆ ಮೂಲಗಳಿಂದ ಬಂದಿರತಕ್ಕಂಥ feedbackನ ಹಿನ್ನೆಲೆಯಲ್ಲಿ O & M ಅನ್ನು ನಾವು ನಿರ್ಬಂಧ ಮಾಡುವುದು ಸರಿಯಲ್ಲವೆಂಬುದು ನಮಗೆ ಮನವರಿಕೆಯಾಗಿದೆ. ಆದ್ದರಿಂದ, ನಾಳೆ, ನಾಡಿದ್ದು O & M ಅನ್ನು ನಿರ್ಬಂಧ ಮಾಡಿರತಕ್ಕಂಥದ್ದನ್ನು relax ಮಾಡಿ ತಕ್ಷಣ ಆ ಬಗ್ಗೆ ಆದೇಶವನ್ನು ಕಳುಹಿಸುತ್ತೇವೆ. ಸನ್ಮಾನ್ಯ ದತ್ತಾರವರು ಸಿ.ಎ.ಜಿ. ರಿಪೋರ್ಟ್ ಬಗ್ಗೆ ಪ್ರಸ್ತಾಪ ಮಾಡಿ ಮೂರು ವರ್ಷಗಳಿಂದ quality waterಗೆ ಸಾವಿರಾರು ಕೋಟಿ ಹಣ ಬಿಡುಗಡೆಯಾಗಿ ಅದಕ್ಕೆ ಅಲಾಟ್‌ಮೆಂಟ್ ಆದರೂ ಸಹ 10%–15% ಮಾತ್ರ ಖರ್ಚಾಗಿದೆ ಎಂಬ ವಿಷಯವನ್ನು ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದರಿಂದ ನಮಗೂ ನೋವು ಆಗುತ್ತದೆ. ಅದಕ್ಕೆ ಇನ್ನು ಮುಂದೆ ಹಾಗೆ ಆಗದ ರೀತಿ ಮತ್ತು ಏಕೆ ಹೀಗೆ ಮಾಡಿದರು ಎನ್ನುವುದನ್ನು ತಿಳಿದುಕೊಳ್ಳುವಂಥ ಎಲ್ಲಾ ಪ್ರಯತ್ನ ಸರ್ಕಾರ ಮಾಡುತ್ತದೆ ಹಾಗೂ ಸೂಕ್ತ ಕ್ರಮ ಸರ್ಕಾರ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಓಕೆ.

2. ವಿಷಯ : ಹಾಸನ ಮತ್ತು ಶಿವಮೊಗ್ಗ ಪಶು ವೈದ್ಯಕೀಯ ಕಾಲೇಜುಗಳು ಭಾರತೀಯ ಪಶು ವೈದ್ಯಕೀಯ ಪರಿಷತ್ತಿನಿಂದ ನೋಂದಣಿ ಆಗದಿರುವ ಪ್ರಯುಕ್ತ ವೈದ್ಯಕೀಯ ಅಭ್ಯರ್ಥಿಗಳಿಗೆ ಆಗಿರುವ ಅನಾನುಕೂಲತೆ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕಂಥ ಶಿವಮೊಗ್ಗ ಮತ್ತು ಹಾಸನದ ಪಶು ವೈದ್ಯಕೀಯ ಕಾಲೇಜುಗಳಿಗೆ ಹೊಸದಾಗಿ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳಬಾರದು ಎಂದು ಕೇಂದ್ರದ ಪಶು ವೈದ್ಯಕೀಯ ಸಂಸ್ಥೆಯಿಂದ

ಸರ್ಕಾರಕ್ಕೆ ಒಂದು ಆದೇಶವನ್ನು ಮಾಡಿದ್ದಾರೆ. ಅದರ ಜೊತೆಗೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಸುಮಾರು 380 veterinary officer ಗಳನ್ನು ನೇಮಕ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಹಾಸನ ಮತ್ತು ಶಿವಮೊಗ್ಗದಲ್ಲಿ ವಿದ್ಯೆ ಕಲಿತರತಕ್ಕಂಥ Graduatesಗಳಿಗೆ ಇವತ್ತು ಅವಕಾಶ ಕಲ್ಪಿಸಿಕೊಟ್ಟಿಲ್ಲ. Central Council of India ದಿಂದ 30 ವರ್ಷಗಳ ಹಿಂದೆ ಪ್ರಾರಂಭವಾದಂಥ ಕಾಲೇಜಿಗೂ admission ಮಾಡಿಕೊಳ್ಳಬಾರದು ಶಿವಮೊಗ್ಗ ಮತ್ತು ಹಾಸನದಲ್ಲಿಯೂ ಯಾವುದೇ ರೀತಿಯ ಹೊಸದಾಗಿ admission ಮಾಡಿಕೊಳ್ಳುವುದು ಬೇಕಿಲ್ಲ infrastructure ಮತ್ತು staff ಗಳ ಕೊರತೆಯಿಂದ ಎನ್ನುವಂಥ ಏನೊಂದು ಆದೇಶವನ್ನು ಇವತ್ತು ಮಾಡಿದ್ದಾರೆ, ಅದರ ಹಿನ್ನೆಲೆಯಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಈಗಾಗಲೇ ನಾವು ಹಾಸನ, ಮಂಡ್ಯ, ಮೈಸೂರಿನಲ್ಲಿ ಸುಮಾರು 80 ಕೋಟಿ ರೂ.ಗಳ ವೆಚ್ಚವನ್ನು ಮಾಡಿ ಎಲ್ಲಾ ರೀತಿಯ infrastructure ನ್ನು development ಮಾಡಿದ್ದೇವೆ. ಹೊಸದಾಗಿ ಕೆಲವು Assistant Professorಗಳನ್ನು ಶಿವಮೊಗ್ಗ ಮತ್ತು ಹಾಸನಕ್ಕೆಂದು ಹೇಳಿ ನೇಮಕ ಮಾಡಿಕೊಂಡು ಅವರೆಲ್ಲರನ್ನೂ ತೆಗೆದುಕೊಂಡು ಬೀದರ್ ಮತ್ತು Bangalore Veterinary Universityಗೆ ಹಾಕಿಕೊಂಡಿದ್ದಾರೆ. ಅವರನ್ನು ಹಾಸನ ಮತ್ತು ಮೈಸೂರಿಗೆ recruitment ಎಂದು ಮಾಡಿಕೊಂಡಿದ್ದಾರೆ. ಇವತ್ತು staff ನ ಕೊರತೆ ಮತ್ತು ಹೊಸದಾಗಿ ವಿದ್ಯಾರ್ಥಿಗಳನ್ನು admission ಮಾಡಿಕೊಳ್ಳಬಾರದು. ಹಾಸನ ಮತ್ತು ಶಿವಮೊಗ್ಗದಲ್ಲಿ ಓದಿರತಕ್ಕಂಥ Graduates ಗಳಿಗೆ 380 ಜನ Veterinary Officers ಗಳನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಅಲ್ಲಿಗೆ recognition ಸಿಕ್ಕೆಲ್ಲವೆನ್ನುವ ಒಂದು ಹಿನ್ನೆಲೆಯಲ್ಲಿ ಅಲ್ಲಿ Graduates ಆಗಿರತಕ್ಕಂಥವರಿಗೆ ಅವಕಾಶ ಕಲ್ಪಿಸದೆ ಆ ವಿದ್ಯಾರ್ಥಿಗಳಿಗೆ ಆಗಿರತಕ್ಕಂಥ ಒಂದು ಅನ್ಯಾಯವಾಗಿದೆ. ಇಲ್ಲಿ ನಾನು ಸರ್ಕಾರಕ್ಕೆ ಮನವಿಯನ್ನು ಮಾಡತಕ್ಕಂಥದ್ದು ಇವತ್ತು staff ನ ಏನು ಕೊರತೆ ಇದೆ. Central Council of India ಏನಿದೆ ಅವರಿಗೆ ಮನವಿ ಮಾಡಿ ಇದರ ಹಿನ್ನೆಲೆಗೆ ಕಾರಣ ಏನು? ಈ ದೇಶದಲ್ಲಿ 700–800 ಕಾಲೇಜುಗಳಲ್ಲಿ ಇದೆ ರೀತಿಯ ಸಮಸ್ಯೆಗಳಿವೆ.

(ಈ ಹಂತದಲ್ಲಿ ಶ್ರೀ ಬಿ.ಆರ್. ಯಾವಗಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾರೋ ಒಬ್ಬರು ಖಾಸಗೀ Veterinary College ನಡೆಸತಕ್ಕಂಥವರು ಕೇಂದ್ರದ Veterinary Councilof Indiaದ ಮುಂದೆ ಹೋಗಿ ನೀವು ಖಾಸಗಿಯವರಿಗೆ ಏನು restriction ಹಾಕುತ್ತೀರಿ ಸರ್ಕಾರ ನಡೆಸತಕ್ಕಂಥ ಕಾಲೇಜುಗಳಲ್ಲಿ ಈ ರೀತಿ ಸಮಸ್ಯೆಗಳು ಇದೆ ಅವರಿಗೊಂದು ನಮಗೊಂದು ತಾರತಮ್ಯ ಏಕೆ ಎನ್ನುವಂಥ ಒಂದು ಅರ್ಜಿಯನ್ನು ಹಾಕಿದ್ದರಿಂದ ಈ ರೀತಿಯ ಏನು ಸಮಸ್ಯೆ ಇದೆ, ಇದಕ್ಕೆ ಸರ್ಕಾರ Veterinary Council of India ಗೆ ದಯವಿಟ್ಟು ಇವತ್ತು ಒಂದು ಮನವಿಯನ್ನು ಸಲ್ಲಿಸಿ ಹೊಸದಾಗಿ recruitment ಮಾಡಿಕೊಳ್ಳತಕ್ಕಂಥದ್ದಕ್ಕೆ ತೀರ್ಮಾನ ಮಾಡುತ್ತೇವೆ. ನಮಗೆ ಹೊಸದಾಗಿ Graduates ಗಳನ್ನು ತಯಾರು ಮಾಡುವುದಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುವುದಕ್ಕೆ ತಮಗೆ ಏನೂ ಸಮಸ್ಯೆ ಇಲ್ಲ. ಇವತ್ತಿನ ಸರ್ಕಾರ ಹಾಲಿಗೆ 2 ರೂ.ಗಳಿಗೆ ಇರುವ ಸಹಾಯಧನವನ್ನು 4 ರೂ.ಗಳಿಗೆ ಏರಿಕೆ ಮಾಡಿದ್ದೀರಿ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಹಸುಗಳನ್ನು ಇಟ್ಟುಕೊಂಡು ಜೀವನ ಮಾಡಬೇಕಾಗುತ್ತದೆ. ಒಂದು ರೀತಿಯಲ್ಲಿ ಈ ರೀತಿ ರೈತರಿಗೆ ಉತ್ತೇಜನ ಕೊಡತಕ್ಕಂಥ ಸಂದರ್ಭದಲ್ಲಿ Veterinary Doctors ಗಳು ಇಲ್ಲದೆ ಹೋದರೆ ಮುಂದೆ ಯಾವ ಪರಿಣಾಮ ಬೀರುತ್ತದೆ. ಅದರ ಹಿನ್ನೆಲೆಯಲ್ಲಿ ಹಾಸನ ಮತ್ತು ಶಿವಮೊಗ್ಗದಲ್ಲಿ ಓದಿರತಕ್ಕಂಥ ವಿದ್ಯಾರ್ಥಿಗಳು ಇವತ್ತು VeterinaryOfficersಗಳು ಆಗತಕ್ಕಂಥದ್ದಕ್ಕೆ ವಂಚನೆಗೆ ಏನು ಒಳಗಾಗಿದ್ದಾರೆ ಅವರಿಗೂ ಅವಾಶವನ್ನು ಕಲ್ಪಿಸಿಕೊಡತಕ್ಕಂಥದ್ದು ಮತ್ತು Veterinary Councilof India ದಿಂದ ಪುನಃ ಇವತ್ತು ಪ್ರವೇಶವನ್ನು ಪಡೆಯತಕ್ಕಂಥದ್ದಕ್ಕೆ ಅವಕಾಶ ಕಲ್ಪಿಸಲಿಕ್ಕೆ ಸರ್ಕಾರ ಇವತ್ತು ಅಲ್ಲಿಗೆ ಹೋಗಿ ಚರ್ಚೆ ಮಾಡಿ ಇವತ್ತು ಅನುಮತಿಯನ್ನು ಪಡೆದುಕೊಳ್ಳತಕ್ಕಂಥದ್ದಕ್ಕೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ಸುಮಾರು 80 ಕೋಟಿ ರು.ಗಳ ಹಣವನ್ನು ಹಾಸನ ಮತ್ತು ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿಗೆಖರ್ಚು ಮಾಡಿದ್ದೇವೆ. ಆ ರೀತಿ ಮೂಲಭೂತ ಸೌಕರ್ಯಗಳನ್ನು ಬೇರೆ ಯಾವ

ಕಾಲೇಜುಗಳಲ್ಲಿ ನಾವು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟು ದೊಡ್ಡ ಮಟ್ಟದಲ್ಲಿ ಇವತ್ತು ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಕೊಟ್ಟಿದ್ದೇವೆ. ಆದರೆ staff ನ ಕೊರತೆಯಿಂದ ಈ ರೀತಿಯ ಏನು ತೀರ್ಮಾನ ಮಾಡಿದ್ದಾರೆ ಅದನ್ನು ಇವತ್ತು ಸರಿಪಡಿಸಿ ಹೆಚ್ಚಿನ ರೀತಿಯಲ್ಲಿ Veterinary College ನಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಿಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಇಲ್ಲಿ ಹಾಸನ ಮತ್ತು ಶಿವಮೊಗ್ಗ Veterinary College ಗಳ ಪ್ರಸ್ತಾಪ ಮಾಡಲಾಗಿತ್ತು. ಆಗ ಮುಖ್ಯಮಂತ್ರಿಗಳು ಇದ್ದರು ಆ ಬಗ್ಗೆ ಗಮನ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಇಲ್ಲಿ ಎರಡು–ಮೂರು ಸಂಗತಿಗಳು ಇವೆ. ಹಾಸನ ಮತ್ತು ಶಿವಮೊಗ್ಗಕ್ಕೆ ಕಟ್ಟಡ ಮತ್ತು ಇನ್ನಿತರೆ ಸವಲತ್ತುಗಳಿಗೆ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿದೆ. ಈಗಾಗಲೇ ಹಿಂದೆ ಪ್ರಾರಂಭ ಮಾಡಿದ Veterinary College ಗಳಿಗೆ ಹೋಲಿಕೆ ಮಾಡಿದರೆ ಬಹಳ ಅತ್ಯುತ್ತಮವಾದ ಕಟ್ಟಡಗಳು ಮತ್ತು ರಸ್ತೆಗಳು ಮತ್ತು ಎಲ್ಲಾ ಅನಕೂಲಗಳು ಆಗಿದೆ. ಈಗಾಗಲೇ ಅಲ್ಲಿ studyಮಾಡಿದಂಥ ವಿದ್ಯಾರ್ಥಿಗಳಿಗೆ Lecturerಆಗಿ ನಿಮ್ಮನ್ನು ನೇಮಕ ಮಾಡಿಕೊಳ್ಳುವುದಕ್ಕೆ ಆ ಕಾಲೇಜಿನ recognition ಸಿಕ್ಕಲ್ಲಿ ಎನ್ನುವ ಕಾರಣವನ್ನು ಹೇಳುವುದಾಗಲಿ ಮತ್ತು admission ಮಾಡಿಕೊಳ್ಳುವುದಿಲ್ಲವೆಂದು ಹೇಳುವುದು ಎಷ್ಟರಮಟ್ಟಿಗೆ ಅದು ಸರಿ ಹೋಗುತ್ತದೆ. Private Collegeಗಳು ಆದರೆ ಕೆಲವೊಂದು ಕೊರತೆಗಳು ಇರುತ್ತದೆ. ನಮ್ಮ ಸರ್ಕಾರಿ Veterinary College ಗಳಿಗೆ staff ಕೊರತೆ ಇದ್ದರೆ ಬೇರೆ ಕಡೆಯಿಂದ staff ತರಬೇಕಾಗುತ್ತದೆ. ಇಲ್ಲಿ ನೇಮಕವಾದವರು ಬೇರೆ ಕಡೆಗೆ ಹೋಗಿ ಇಲ್ಲಿ ಕೊರತೆಯಾಗಿ ತೊಂದರೆ ಆಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, ಈ ವರ್ಷದಿಂದಲ್ಲೇ admission ಪ್ರಾರಂಭವಾಗಬೇಕು. ದೆಹಲಿಗೆ ಹೋಗಿ ನಿಮ್ಮ Veterinary Council of India ಗೆ ನೀವು convince ಮಾಡಿ. ಒಂದು ವರ್ಷ time ಕೊಡಲಿ ಅದಕ್ಕೆ ಏನೇನು ಅಗತ್ಯ ಇದೆ ಎಂದು ಹೇಳಿದರೆ

ಅದನ್ನು ಮಾಡೋಣ. ಈ Lecturer ಮತ್ತು Professor ಗಳ ಕೊರತೆ ಒಂದಲ್ಲ ಒಂದು ರೀತಿಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಾವು ಶಿಕ್ಷಣವನ್ನು ಕೊಟ್ಟ ಮೇಲೂ ಸಹ ಏತಕ್ಕೆ ಈLecturer ಈ ಮತ್ತು Professor ಗಳ ಕೊರತೆ ಆಗುತ್ತದೆ ನಮಗಂತೂ ಗೊತ್ತಾಗುತ್ತಿಲ್ಲ. ಈಗ ಇರುವ ಆಸ್ಪತ್ರೆಗಳಿಗೆ Doctors ಗಳು ಇಲ್ಲ. ಇರುವ Veterinary Hospital ಗಳಿಗೆ Doctors ಗಳು ಇಲ್ಲ. ಹತ್ತಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಕಾಲೇಜುಗಳನ್ನು ಕಟ್ಟಿದ್ದು ಇಂತಹ time ನಲ್ಲಿ ವಿದ್ಯಾರ್ಥಿಗಳಿಗೆ ಸವಲತ್ತುಗಳು ಸಿಗದಿದ್ದರೆ ಹಾಸನ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕಲಿತಮಕ್ಕಳ ಅಪರಾಧ ಏನು? ನಮ್ಮ ಸರ್ಕಾರದ ಯಾವುದೋ ಒಂದು ಕೊರತೆಯಿಂದ ಅಲ್ಲಿ Graduation ಮಾಡಿದಂಥವರಿಗೆ ನಾಳೆ ಅಲ್ಲಿ ನೇಮಕಾತಿ ಮಾಡಿಕೊಳ್ಳುವುದಿಲ್ಲ ಅವರಿಗೆ ಉದ್ಯೋಗದ ಅವಕಾಶ ತಪ್ಪಿ ಹೋಗುತ್ತದೆ ಎನ್ನುವುದಾದರೆ ಎಷ್ಟರ ಮಟ್ಟಿಗೆ ಅದು ಸರಿ ಹೋಗುತ್ತದೆ? ಅದಕ್ಕೋಸ್ಕರ ತಕ್ಷಣ ಆ ಕಡೆಗೆ ಸರ್ಕಾರ ಗಮನ ಕೊಟ್ಟು ದಯಮಾಡಿ ಆ Veterinary Council of India ಗೆ at least ನಮಗೆ two years time ಕೊಡಿ ಏನೇನು ಅವಶ್ಯಕತೆ ಇದೆ ಆ infrastructure ಎಲ್ಲವನ್ನು ನಾವು fulfil ಮಾಡುತ್ತೇವೆಂದು ಹೇಳಬೇಕು. ಈ ವರ್ಷದಿಂದ admission ಮಾಡಿಕೊಳ್ಳುವಂಥದ್ದು ಮತ್ತು ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟು ಆ ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆಸಚಿವರು) :– ಮಾನ್ಯ ಛೇರ್ಮನ್‌ರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಯಡಿಯೂರಪ್ಪನವರು ಅತ್ಯಂತ ಪ್ರಾಮುಖ್ಯವಾದಂಥ ಪ್ರಶ್ನೆಯನ್ನು ಎತ್ತಿದ್ದಾರೆ. ಇಲ್ಲಿ ಎರಡು ವಿಚಾರಗಳು ಅಡಕವಾಗಿವೆ. ಹಾಸನ, ಶಿವಮೊಗ್ಗ ಬೀದರ್ ಕಾಲೇಜುಗಳಲ್ಲಿ admission ಮಾಡಲೇಬಾರದು ಎನ್ನುವಂಥ ರೀತಿಯಲ್ಲಿ Veterinary Council of India ದವರು ಒಂದು ನಿರ್ಬಂಧವನ್ನು ಹಾಕಿದ್ದಾರೆ. CET ನಡೆಯುತ್ತಿದೆ ಈಗ admission

ನಡೆಯುತ್ತಿದೆ. ಈಗ ಬೆಂಗಳೂರು ಒಂದು ಕಾಲೇಜು ಬಿಟ್ಟರೆ ಯಾವ ಕಾಲೇಜು ಇಲ್ಲ. ಈಗ ಅನಿವಾರ್ಯವಾಗಿ admission ಮಾಡುವಂಥದ್ದು ಇದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆಗ Veterinary Council of India ದವರು ಹಾಕಿರುವಂಥ ನಿರ್ಬಂಧವನ್ನು ಮತ್ತು ಅದಕ್ಕೆ ಪೂರಕವಾಗಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕೂಡ ಕೊಟ್ಟಂಥ ಸಂದರ್ಭದಲ್ಲಿಯೂ ಕೂಡ ಕೆಲವೊಂದು ನ್ಯೂನತೆಗಳನ್ನು ಗಮದಲ್ಲಿಟ್ಟುಕೊಂಡು ಇವತ್ತು admission ಮಾಡಬಾರದೆಂದು ಹೇಳಿರುತ್ತಾರೆ. 391 ಹುದ್ದೆಗಳಿಗೆ ನಾವು call for ಮಾಡಿ ಈಗಾಗಲೇ ಪ್ರಕ್ರಿಯೆ ಪ್ರಾರಂಭವಾಗಿದೆ. ಹಾಸನ ಮತ್ತು ಶಿವಮೊಗ್ಗ ಕಾಲೇಜಿನಿಂದ ಬಂದ ಸುಮಾರು 72 ಜನ Graduates ಗಳನ್ನು Degree ನ್ನು recognize ಮಾಡಿದ್ದಾರೆ. ಇದು ಗೊತ್ತಾದ ತಕ್ಷಣ ನಾನು ಇಲಾಖೆಯ ಜವಬ್ದಾರಿಯನ್ನು ತೆಗೆದುಕೊಂಡ ತಕ್ಷಣ ನಾನು 4–6 ಸಲ ಅಧಿಕಾರಿಗಳ ಸಭೆಯನ್ನು ಮಾಡಿ ಮುಖ್ಯಮಂತ್ರಿಗಳಿಂದ ಕೇಂದ್ರದ ಕೃಷಿ ಸಚಿವರಿಗೆ ನಾನು ಕಾಗದವನ್ನು ಕೂಡ ಬರೆಸಿರುತ್ತೇನೆ. ಇದನ್ನು ಹೆಚ್ಚು ಚರ್ಚೆ ಮಾಡುವುದಕ್ಕಿಂತ ವಿವಾದವನ್ನು ಇತ್ಯರ್ಥ ಮಾಡಬೇಕಾದಾಗ ಆ VCI ರವರು ಹಾಕಿರತಕ್ಕಂಥ regulations ಏನಿವೆ ಅವುಗಳಿಗೆ exemption ಕೊಡಿ ಎನ್ನತಕ್ಕಂಥ ರೀತಿಯಲ್ಲಿ ವಾದವನ್ನು ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಅದಕ್ಕಾಗಿ ನಾನು ಅವರಿಗೆ time ಕೇಳಿದ್ದೇನೆ. ಬಹುಶಃ ನಾಳೆ ನನಗೆ ಬರುವಂತೆ ಹೇಳಿದ್ದಾರೆ. ನಾಳೆ ನಾನು ದೆಹಲಿಗೆ ಹೋಗುತ್ತೇನೆ ಕೇಂದ್ರದ ಕೃಷಿ ಸಚಿವರಿಗೆ ವಿನಂತಿ ಮಾಡಿ ಈ ವಿಚಾರದ ಬಗ್ಗೆ ಮಧ್ಯೆ ಪ್ರವೇಶ ಮಾಡಿ VCIಗೆ ನಿರ್ದೇಶನವನ್ನು ಕೊಡಬೇಕೆನ್ನುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ನಿಜ ಈ ಎರಡೂ ವಿಚಾರಗಳೂ ಕೂಡ ಅತ್ಯಂತ ಅಂತಕಕಾರಿ ವಿಚಾರ. ನಮ್ಮಲ್ಲಿ ಸುಮಾರು 800 vacanciesಇವೆ. ಇವತ್ತು ಡಾಕ್ಟರ್ಸ್ ಇಲ್ಲ. ಡಾಕ್ಟರ್ಸ್ appoint ಮಾಡೋಣವೆಂದರೆ ಈ problems ಬಂದಿವೆ. ಹಾಗಾಗಿ V.C.I. ಯಿಂದ ಬಂದಿರತಕ್ಕಂಥದಕ್ಕೆ ಅನಿವಾರ್ಯವಾಗಿ follow ಮಾಡಬೇಕಾಗುತ್ತದೆ. ಏಕೆಂದರೆ ಡಿಗ್ರಿ ಕೊಡತಕ್ಕಂಥದ್ದು, recognize ಮಾಡತಕ್ಕಂಥವರು ಅವರೇ ಹಾಗಾಗಿ

V.C.I. ಮುಂದೆ ಹೋಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಯಾವುದೇ ರೀತಿಯಲ್ಲಿಯೂ ಕೂಡ ಪರಿಹಾರವನ್ನು ತರತಕ್ಕಂಥ ಕೆಲಸಕ್ಕೆ ಪ್ರಾಮಾಣಿಕವಾದತಂಹ ಪ್ರಯತ್ನ ಮಾಡುತ್ತೇನೆ ಎಂದು ತಮ್ಮ ಮುಖೇನ ಇಬ್ಬರೂ ನಾಯಕರಿಗೂ ಕೂಡ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ (ಕಡೂರು) :– ಸನ್ಮಾನ್ಯ ಜಯಚಂದ್ರರವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನಾನೂ ಕೂಡ ಅಧಿಕಾರಿಗಳನ್ನು ಕಂಡು ಕೇಳಿದ್ದೆ. ಪ್ರಾಮಾಣಿಕವಾಗಿ ಸ್ಪಂದಿಸಿದ್ದಾರೆ. Immediate ಆಗಿ actionತೆಗೆದುಕೊಂಡಿದ್ದಾರೆ. ಆದರೆ ಒಂದು ವಿಚಾರ ಮಾನ್ಯ ಜಯಚಂದ್ರರವರ ಗಮನಕ್ಕೆ ತರುತ್ತೇನೆ, ಈ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಅಲ್ಲಿ ಏನಾಗಿದೆಯೆಂದರೆ, ಉಳಿದವರದ್ದೆಲ್ಲಾ verification ನಡೆಯುತ್ತಿದೆ. ಬೀದರ್‌ಗೆ permission ಸಿಕ್ಕಿದೆ ತಮಗೆ ಜ್ಞಾಪಕವಿರಬಹುದು. ಹಾಸನ, ಶಿವಮೊಗ್ಗದ graduates ಏನಿದ್ದಾರೆ, ಅವರುಗಳಿಗೆ ನೀವು ಹೇಳಿದ ತೊಂದರೆಯಿಂದ verification ಮಾಡಲಿಕ್ಕೆ ಆಗಲಿಲ್ಲ. ಈಗ ಅವರುಗಳಿಗೆ ನಾಳೆ ಇಷ್ಟು ಜನರಿಗೆ ಮಾತ್ರ verification ಮಾಡಿ ಅಷ್ಟು ಜನರಿಗೆ appointment order ಕೊಟ್ಟರೆ, ನಮ್ಮ ಗತಿ ಏನು ಎನ್ನುವ ಪ್ರಶ್ನೆ ಇದೆ. ನಾನು ಅವರ ಮನಸ್ಸಿನ ಆತಂಕವನ್ನು ಹಂಚಿಕೊಳ್ಳುತ್ತಾ ನಿಮಗೆ ಏನು ಹೇಳುತ್ತೇನೆಂದರೆ, ನೀವು ಬಹಳ ಬುದ್ಧಿವಂತಿಕೆಯಿಂದ ಆ ಪ್ರಕ್ರಿಯೆಯಿಂದ ಇವರನ್ನೂ ಸೇರಿಸೋಣವೆಂದು ದೂಡಿಕೊಂಡು ಬಂದಿದ್ದೀರಿ. ನೀವು ದೆಹಲಿಗೆ ಹೋಗೆ ಮಾತನಾಡಿಕೊಂಡು ಬರುವವರೆಗೆ verification process ಅನ್ನು ಹಾಗೂ ಹೀಗೂ ಎಳೆದುಕೊಂಡು ಹೋಗಿ ಇವರನ್ನೂ ಸೇರಿಸಿ ಒಟ್ಟಾರೆ ಮಾಡಿದರೆ ಸ್ವಲ್ಪ ಉಪಕಾರವಾಗುತ್ತದೆ. ನೀವು ದೆಹಲಿಗೆ ಹೋಗಿ ಮಾತನಾಡಿಕೊಂಡು ಬರುವವರೆಗೆ ಅದನ್ನು ತಾವು ಗಮನಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ತಾವು ಹೇಳಿದಂತಹ ವಿಚಾರವನ್ನು ನಾನು ಗಮನಿಸಿಯೇ ಈಗಾಗಲೇ ನಾವು 72 ಜನರಿಗೆ ಏನು ಪೊಲೀಸ್ verificationಮಾಡಬೇಕಾಗಿತ್ತು ಅದನ್ನೂ ಕೂಡ ನಿಗದಿಮಾಡಿ, ಅವರಿಗೂ ಕೂಡverification ಮಾಡಿಸುತ್ತಿದೇವೆ. 391 posts ನಲ್ಲಿ ಎಲ್ಲಾ ಸೇರಿದರೂ ಕೂಡ 270 ಜನ ಬರುತ್ತಾರೆ. ಅದರಲ್ಲೂ ಕೂಡ ಇನ್ನೂ vacancies

ಉಳಿಯುತ್ತವೆ. ಆದರೆ ಡಿಗ್ರಿಗಳನ್ನು de-recognize ಮಾಡಿರುವ ಹಿನ್ನೆಲೆಯಲ್ಲಿ, recognition ನಲ್ಲಿ ಏನಾದರೂ ಆ aspect ಅನ್ನು V.C.I.ಯಲ್ಲಿ ಕುಳಿತುಕೊಂಡು exemption ತೆಗೆದುಕೊಳ್ಳುವವರೆಗೂ ಆ ಪ್ರಕ್ರಿಯೆಯನ್ನು ಮುಂದುವರೆಸಿ ಎಂದು ಆದೇಶವನ್ನೂ ಕೂಡ ಕೊಟ್ಟಿದ್ದೇವೆ. ಈಗ ಆ ಪ್ರಕ್ರಿಯೆ ಕೂಡ ಮುಂದುವರೆಯುತ್ತದೆ. ಒಟ್ಟಾರೆ ನಮಗೆ ಬಂದಿರತಕ್ಕಂಥ ನಿರ್ಬಂಧವನ್ನು ತಪ್ಪಿಸಿಕೊಳ್ಳುವುದಕ್ಕೆ ಏನು ಮಾಡಬೇಕೆನ್ನುವುದು ಆಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಎರಡು ವರ್ಷ, ಒಂದು ವರ್ಷ ಅವರಿಗೂ ಒಂದು ಅವಕಾಶ ಕೊಟ್ಟು, ಅವರನ್ನೂ ಕೂಡ recruitಮಾಡಿದರೆ ಸೂಕ್ತ ಎನ್ನುವುದು ನನ್ನ ಅನಿಸಿಕೆ. ಎರಡು ವರ್ಷ ಅವರಿಗೆ ನಿಯಮಾವಳಿ ಇಟ್ಟು, ಎರಡು ವರ್ಷದಲ್ಲಿrecognition ಗೆ ಅವಕಾಶ ಆಗಬಹುದು. ಎರಡು ವರ್ಷದ ಅವಕಾಶ ಕೊಟ್ಟು ಅವರಿಗೂ ಕೊಟ್ಟರೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ.ಜಯಚಂದ್ರ : Veterinary Council of India Act ಅನ್ನು ರಾಜ್ಯ ಸರ್ಕಾರವರೂ ಕೂಡ ಒಪ್ಪಿಕೊಂಡಿದ್ದೇವೆ. Federal structure ನಲ್ಲಿ ಏಕಾಏಕಿ ಆ ತೀರ್ಮಾನ ಮಾಡುವುದಕ್ಕಿಂತ ಅವರು ವಿಚಾರ ಮಾಡಿ, ಪ್ರಸ್ತಾಪ ಮಾಡಿ, ಅನಿವಾರ್ಯ ಸಂದರ್ಭದಲ್ಲಿ ನಾವು ರಾಜ್ಯ ಸರ್ಕಾರ, ನಮ್ಮದೇ ಆದಂತಹ Actಏನಿದೆ ಅದರಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರೆ ಚಿಂತನೆ ಮಾಡಿದ್ದೇವೆ. ಅಂತಿಮಾವಾಗಿ ಅಲ್ಲಿ ಹೋಗಿ ಅವರು ಮಾತುಕತೆ ನಡೆಸಿದ ಸಂದರ್ಭದಲ್ಲಿ ಅವರೇನಾದರೂ ಒಪ್ಪಿಗೆ ಕೊಟ್ಟರೆ, ಶಾಶ್ವತವಾಗಿ ಪರಿಹಾರವಾಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ನಾಳೆ ಹೋಗಿ ಬಂದ ನಂತರ ತೀರ್ಮಾನ ಮಾಡುತ್ತೇನೆ. ಆದಷ್ಟು ಬೇಗನೆ ತೀರ್ಮಾನ ಮಾಡುತ್ತೇನೆ. ಇವತ್ತು admissions ಗೆ ಆಗುತ್ತಿರುವ ತೊಂದರೆ, appointment ಗೆ ಆಗುತ್ತಿರುವ ತೊಂದರೆಯೂ ಕೂಡ ನಮ್ಮ ಸರ್ಕಾರದ ಗಮನದಲ್ಲಿದೆ. ನಾವು ಈಗಾಗಲೇ ಏನು ಮೂಲಭೂತ ಸೌಕರ್ಯಗಳನ್ನು ಕೊಡುತ್ತಿದ್ದೇವೆ, ಸುಮಾರು ಎರಡು ಕಾಲೇಜುಗಳಿಂದ ಸುಮಾರು 150 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ICAR

ನವರೂ ನಮ್ಮನ್ನು recognize ಮಾಡಿದ್ದಾರೆ. ಇಡೀ ದೇಶದಲ್ಲಿಯೇ best ಮೂಲಭೂತ ಸೌಕರ್ಯವನ್ನು ಕೊಟ್ಟಿದ್ದೀರಿ ಎಂದು ಕಮಿಟಿಯವರು ನಮ್ಮನ್ನು ಕರೆದು ಹೇಳುತ್ತಾರೆ. ಆದರೆ ultimately V.C.I.ಯವರು reject ಮಾಡುತ್ತಾರೆ. ಈ ರೀತಿ ಆಗಿರುವುದರಿಂದ ಆ confusion ಅನ್ನು clear ಮಾಡುವುದಕ್ಕೋಸ್ಕರ ಅವರ ಮುಂದೆ ಹೋಗಿ ಮನವರಿಕೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ ತದನಂತರ ಏನು ಕ್ರಮ ಜರುಗಿಸಬೇಕು, ನಮ್ಮ Act ಪ್ರಕಾರ, ನಮ್ಮ students–ಅನ್ನು ಇವತ್ತು ಉಳಿಸಿಕೊಳ್ಳಬೇಕಾಗದಾಗ ಏನು ಮಾಡಬೇಕೆನ್ನುವುದರ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ.

ಅಧ್ಯಕ್ಷರು : ಈ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಮಾನ್ಯ ಸಹಕಾರ ಸಚಿವರು ಮಾತನಾಡುವುದು.

4. ನಿಯಮ 69ರ ಅಡಿಯಲ್ಲಿ ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿರುವ ಬಗೆಗಿನ ಚರ್ಚೆಯಲ್ಲಿ ಸಹಕಾರಿ ಸಂಘದ ಬಗ್ಗೆ ಪ್ರಸ್ತಾಪಿಸಿದ್ದು ಸರ್ಕಾರದ ಉತ್ತರ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ, ಸಹಕಾರ ಸಂಘದ ಸಾಲ ಮನ್ನಾ ಮಾಡುವಂತಹ ವಿಚಾರದಲ್ಲಿಯೂ ಕೂಡ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಲು ಬಯಸುತ್ತೇನೆ.

ಕೃಷಿ ಸಹಕಾರ ಸಂಘಗಳಿಂದ ದಿನಾಂಕ 1.8.2011 ರಿಂದ 25.7.2012 ರ ಅವಧಿಯಲ್ಲಿ ಪಡೆದಂತಹ ಕೃಷಿ ಅಲ್ಪಾವಧಿ ಸಾಲ ಮತ್ತು ಅದರ ಬಡ್ಡಿಯನ್ನು ಮನ್ನಾ ಮಾಡುವಂತಹ ಒಂದು ನಿರ್ಧಾರವನ್ನು ಹಿಂದಿನ ಸರ್ಕಾರ ಘೋಷಣೆ ಮಾಡಿದೆ. ಆದರೆ ಆ ಘೋಷಣೆ ಮಾಡಿದಾಗ ಅದಕ್ಕೆ ಅಗತ್ಯವಾದ ಹಣವನ್ನು ಆ ಸಂದರ್ಭದಲ್ಲಿ ಅವರು ಮುಡುಪಾಗಿಟ್ಟಿರಲಿಲ್ಲ. 940 ಕೋಟಿ ರೂಪಾಯಿಗಳ ಆ ಒಂದು ಸಂದರ್ಭದಲ್ಲಿಟ್ಟಿದ್ದರು. ಆ ಹಣ ಈಗಾಗಲೇ ಜಮಾ ಆಗಿ, ಸರ್ಕಾರದ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವಾಗ ಈ ವರ್ಷದ ಬಜೆಟ್‌ನಲ್ಲಿಯೂ ಕೂಡ 800 ಕೋಟಿ ರೂಪಾಯಿ ಪ್ರಸ್ತಾಪ ಮಾಡಿದ್ದರು. ಅದರಲ್ಲಿ 200 ಕೋಟಿ ರೂಪಾಯಿ ಪ್ರಸ್ತಾಪ ಮಾಡಿದ್ದರು. ಅದರಲ್ಲಿ 200